■ ವಿಶಾಖ ಎನ್.

# ಪ್ರಭಾಸ್, ದೀಪಿಕಾ, ಕಮಲ್, ಅಮಿತಾಭ್
# ಮಹಾಸಂಗಮ



ತೆಲುಗು ಸಿನಿಮಾ 'ಮಹಾನಟಿ' ತೆರೆಕಂಡು ಐದು ವರ್ಷಗಳಾದವು. ಅದರ ಯಶಸ್ಸಿನ ಅಲೆ ಮೇಲೆ ಇದ್ದಾಗಲೇ, ಮೂರು ವರ್ಷಗಳ ಹಿಂದೆ ನಿರ್ದೇಶಕ ನಾಗ್ ಅಶ್ವಿನ್, ಮುಂದಿನ ತಮ್ಮ ಸಿನಿಮಾಗೆ ದೀಪಿಕಾ ಪಡುಕೋಣೆ ಅವರ ಕೈಲಿ ಸಹಿ ಹಾಕಿಸಿದ್ದರು. ಕೋವಿಡ್ ಬಂದದ್ದೇ ಸಿನಿಮಾ ಕೆಲಸಗಳು ಮುಂದೂಡಿಕೆಯಾದವು. ಹಾಗೆಂದು ನಾಗ್ ಅಶ್ವಿನ್ ಸುಮ್ಮನೆ ಇರಲಿಲ್ಲ. ಕೆಲವು ತಿಂಗಳ ನಂತರ ಅಮಿತಾಭ್ ಬಚ್ಚನ್ ಕೂಡ ಸಿನಿಮಾದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳಲು ಒಪ್ಪಿಗೆ ಸೂಚಿಸಿದರು. ನಾಯಕ ಪ್ರಭಾಸ್ ಎನ್ನುವುದೂ ಮೊದಲೇ ನಿಕ್ಕಿಯಾಗಿತ್ತು. ತೆಲುಗಿನಲ್ಲಿ ದೀಪಿಕಾ ಅವರಿಗೆ ಇದು ಮೊದಲ ಸಿನಿಮಾ.

ಸೈ–ಫೈ ಥ್ರಿಲ್ಲರ್ ಆಗಿರುವ ಈ ಸಿನಿಮಾದ ಚಿತ್ರಕಥೆಯನ್ನು ನಾಗ್ ಅಶ್ವಿನ್ ಉಜ್ಜಲು ಆರಂಭಿಸಿ ವರ್ಷಗಳೇ ಉರುಳಿವೆ. ಹಿಂದೆಂದೂ ನೋಡದೇ ಇರುವ ರೂಪದಲ್ಲಿ ದೀಪಿಕಾ ತೆರೆಮೇಲೆ ಕಾಣಿಸಿಕೊಳ್ಳಲಿದ್ದಾರೆ ಎನ್ನುವುದು ಅವರ ಭರವಸೆ. ಕಳೆದ ತಿಂಗಳಷ್ಟೇ ಕಮಲ ಹಾಸನ್ ಅವರೂ ಈ ಚಿತ್ರದಲ್ಲಿ ನಟಿಸಲು ಒಪ್ಪಿರುವ ಸುದ್ದಿ ಹೊರಬಿದ್ದಿತು. ಅವರು ಪ್ರತಿನಾಯಕನಾಗಿ ಅಭಿನಯಿಸಲಿರುವುದು ಸಿನಿಮಾದ ಭಿತ್ತಿ ಎಷ್ಟು ದೊಡ್ಡದಿರಬಹುದು ಎನ್ನುವುದಕ್ಕೆ ಸಾಕ್ಷಿಯಾಗಿದೆ.

ಕಡಿಮೆ ಎಂದರೂ ₹600 ಕೋಟಿ ಬಜೆಟ್‌ನಲ್ಲಿ ತಯಾರಾಗಲಿರುವ ಈ ಸಿನಿಮಾಗೆ ಸದ್ಯಕ್ಕೆ 'ಪ್ರಾಜೆಕ್ಟ್ ಕೆ' ಎಂಬ ಶೀರ್ಷಿಕೆಯನ್ನು ನಿರ್ದೇಶಕರು ಇಟ್ಟಿದ್ದಾರೆ. 'ಮಹಾನಟಿ', 'ಸೀತಾರಾಮಂ' ಸಿನಿಮಾಗಳನ್ನು ನಿರ್ಮಿಸಿದ್ದ ಸಿ. ಅಶ್ವಿನಿ ದತ್ ಈ ಬೃಹತ್ ಬಜೆಟ್‌ನ ಚಿತ್ರಕ್ಕೆ ಹಣಕಾಸು ಹೂಡಿಕೆ ಮಾಡುತ್ತಿದ್ದಾರೆ. ರಾಮೋಜಿ ಫಿಲ್ಮ್ ಸಿಟಿಯಲ್ಲಿ ಸೆಟ್ ಹಾಕಿ ಚಿತ್ರೀಕರಣ ನಡೆಸಲು ಸಿದ್ಧತೆಗಳು ಕೂಡ ಶುರುವಾಗಿವೆ.







ದಿಶಾ ಪಟಾನಿ ಕೂಡ ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿರುವ ಈ ಸಿನಿಮಾದ ಹಾಡುಗಳಿಗೆ ಸಂತೋಷ್ ನಾರಾಯಣನ್ ಸ್ವರ ಸಂಯೋಜನೆ ಮಾಡುವರು. ಮೊದಲು ಎ.ಆರ್. ರೆಹಮಾನ್ ಅವರಿಂದ ಸಂಗೀತ ಕೊಡಿಸಬೇಕು ಎಂಬ ವಿಫಲ ಯತ್ನವನ್ನು ನಾಗ್ ಅಶ್ವಿನ್ ಮಾಡಿದ್ದರು. ಎಲ್ಲವೂ ಅಂದುಕೊಂಡಂತೆ ಆದರೆ ಮುಂದಿನ ವರ್ಷದ ಪ್ರಾರಂಭದಲ್ಲಿಯೇ ಪ್ರಭಾಸ್–ದೀಪಿಕಾ ಜೋಡಿಯನ್ನು ತೆರೆಮೇಲೆ ನೋಡುವ ಅವಕಾಶ ಪ್ರೇಕ್ಷಕರದ್ದಾಗಲಿದೆ. ನೆನಪಿರಲಿ, ಇದು ದೀಪಿಕಾ ನಟಿಸಲಿರುವ ಮೊದಲ ತೆಲುಗು ಸಿನಿಮಾ. ■

## ಶಾರುಖ್ ಹೊಸ ವರಸೆ



ಸಿನಿಮಾ ಪ್ರಚಾರ ತಂತ್ರ ಅನುಕ್ಷಣವೂ ಬದಲಾಗುತ್ತಿದೆ ಎಂದು ಕೆಲವು ದಿನಗಳ ಹಿಂದಷ್ಟೇ ಶಾರುಖ್ ಖಾನ್ ಹೇಳಿದ್ದರು. ಈಗ ಅವರೇ ಆ ಬದಲಾವಣೆಗೆ ಇನ್ನೊಂದು ಕೊಸರನ್ನು ಸೇರಿಸಿದ್ದಾರೆ. ಇತ್ತೀಚೆಗೆ ಅವರು ಟ್ವಿಟರ್‌ನಲ್ಲಿ 'ಆಸ್ಕ್ ಮಿ ಎನಿಥಿಂಗ್' (ಎಎಂಎ) ಎಂದು ಪೋಸ್ಟ್ ಮಾಡಿದರು. ಅಭಿಮಾನಿಗಳು ಸಂದೇಶಗಳನ್ನು ಪುಂಖಾನುಪುಂಖವಾಗಿ ಟೈಪಿಸಲಾರಂಭಿಸಿದರು. 'ಜವಾನ್ ಸಿನಿಮಾದಲ್ಲಿನ ಅಭಿನಯ ಕಷ್ಟವಿತ್ತೋ, ರಾಜ್‌ಕುಮಾರ್ ಹಿರಾನಿ ಸಿನಿಮಾದಲ್ಲಿನ ನಟನೆ ಕಷ್ಟವೆನಿಸಿತೊ' ಎಂಬ ಪ್ರಶ್ನೆ ಎದುರಾಯಿತು. ಸಾಹಸದ ದೃಶ್ಯಗಳನ್ನು ಆಧರಿಸಿ, 'ಜವಾನ್' ಸಿನಿಮಾದ ಪಾತ್ರವೇ ಸವಾಲಿನದ್ದಾಗಿತ್ತು ಎಂದು ಶಾರುಖ್ ಹೇಳಿದರು. 'ಒಂದು ಸಂಜೆಯನ್ನು ಈಗ ಹೇಗೆ ಕಳೆಯಲು ಬಯಸುವಿರಿ' ಎಂಬ ಇನ್ನೊಂದು ಪ್ರಶ್ನೆಗೆ, 'ನಿರ್ದೇಶಕ ಅಟ್ಲೆ ಜತೆ ಕೂತು ಜವಾನ್ ಸಿನಿಮಾ ನೋಡುವೆ' ಎಂದರು.

ಶಾರುಖ್ ಖಾನ್ ನೋಡನೋಡುತ್ತಲೇ ಈ ಟ್ವಿಟರ್ ಸಂವಾದವನ್ನು 'ಜವಾನ್' ಸಿನಿಮಾ ಪ್ರಚಾರದ ವೇದಿಕೆಯಾಗಿ ಪರಿವರ್ತಿಸಿದರು. ಪ್ರತಿನಾಯಕನಾಗಿ ಅಭಿನಯಿಸಿರುವ ವಿಜಯ್ ಸೇತುಪತಿ ಪಾತ್ರದ ಕುರಿತು ಮೆಚ್ಚುಗೆಯನ್ನೂ ವ್ಯಕ್ತಪಡಿಸಿದರು.

ಅಟ್ಲೆ ನಿರ್ದೇಶಿಸಿರುವ 'ಜವಾನ್' ಹಿಂದಿ ಸಿನಿಮಾದಲ್ಲಿ ನಯನತಾರ, ಪ್ರಿಯಾಮಣಿ, ಸಾನ್ಯಾ ಮಲ್ಹೋತ್ರ, ಸುನಿಲ್ ಗ್ರೋವರ್, ಯೋಗಿ ಬಾಬು ನಟಿಸಿದ್ದಾರೆ. ಅನಿರುದ್ಧ್ ರವಿಚಂದರ್ ಹಾಡುಗಳಿಗೆ ಸ್ವರ ಸಂಯೋಜನೆ ಮಾಡಿದ್ದಾರೆ. ಇನ್ನೆರಡು ಮೂರು ತಿಂಗಳಲ್ಲಿ ಸಿನಿಮಾ ತೆರೆಕಾಣುವ ನಿರೀಕ್ಷೆ ಇದೆ.

'ಟೀಸರ್ ಯಾವಾಗ ಬರುತ್ತದೆ' ಎಂಬ ಅಭಿಮಾನಿಯೊಬ್ಬನ ಪ್ರಶ್ನೆಗೆ ಶಾರುಖ್ ಉತ್ತರ ಕೊಟ್ಟಿದ್ದು ಹೀಗೆ: 'ಯಾವತ್ತು ಬರುತ್ತದೆ ಎಂದು ಮೊದಲೇ ಹೇಳಿದರೆ ಅದು ಟೀಸರ್ ಅಂತ ಹೇಗೆ ಅನಿಸಿಕೊಳ್ಳುತ್ತದೆ?' ■